**<u>ಸಾಕ್ಷಿಗೆ ದಿನಾಂಕ 05-01-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀಮತಿ ಎಸ್ ಎಂ ವಕೀಲರಿಂದ ಶ್ರೀ ಎ ಎನ್ ಹೆಚ್ ವಕೀಲರ ಪರವಾಗಿಃ</u>**

1. ನಾನು ಶಾಲೆ ಕಲಿತಿರುವುದಿಲ್ಲ. ನಾನು ವ್ಯವಸಾಯ ವೃತ್ತಿ ಮಾಡಿಕೊಂಡಿರುತ್ತೇನೆ. ನನ್ನದೇ ಜಮೀನನಲ್ಲಿ ಮತ್ತು ಬೇರೆಯವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ನನ್ನದು ಒಂದೂವರೆ ಎಕರೆ ಜಮೀನು ಇದೆ. ಸದರಿ ಜಮೀನಿನಲ್ಲಿ ಯಾವುದೇ ಬೆಳೆ ಇಲ್ಲ. ಅಪಘಾತಕ್ಕೂ ಮೊದಲು ಸೀಬೆ ಹಣ್ಣು ಮತ್ತು ತೆಂಗಿನ ಮರಗಳು ಇದ್ದವು ಮತ್ತು ರಾಗಿ, ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದೇನು. ಸದರಿ ಕೃಷಿಯಿಂದ ವಾರ್ಷಿಕ ರೂ.5,00,000/- ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನಗೆ ಈಗ 61-62 ವರ್ಷ ವಯಸ್ಸಾಗಿದೆ. ನನಗೆ 3 ಜನ ಹೆಣ್ಣು ಮಕ್ಕಳು ಇದ್ದು, ಅವರಲ್ಲಿ ಹಿರಿಯ ಮತ್ತು ಕಿರಿಯ ಮಗಳಿಗೆ ಮದುವೆಯಾಗಿದೆ. ಈಗ ನಾನು ಯಾವುದೇ ಸಂಪಾದನೆ ಮಾಡುತ್ತಿಲ್ಲ. ನಾನು ಸಾಲ ಮಾಡಿ ಮನೆಯ ಖರ್ಚನ್ನು ನಿಭಾಯಿಸುತ್ತಿದ್ದೇನೆ. ಈಗ ನಾನು ನನ್ನ ಹೆಂಡತಿ ಮತ್ತು ಎರಡನೇ ಮಗಳು ಜೊತೆಯಾಗಿ ಇರುತ್ತೇವೆ. ನಾನು ಪ್ರತಿ ತಿಂಗಳು ರೂ.15,000/- ಸಂಪಾದಿಸುತ್ತಿದ್ದೇನು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ಅಪಘಾತದ ದಿನ ಚಾಲನೇ ಮಾಡುತ್ತಿದ್ದ ದ್ವಿಚಕ್ರ ವಾಹನ ನನ್ನದೇ ಆಗಿರುತ್ತದೆ. ನನಗೆ ಡಿಎಲ್ ಇದೆ. ಅಪಘಾತವು ಸಂಜೆ 5-30 ರ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ 8 ನೇ ಮೈಲಿ ರಸ್ತೆಯ ಮೇಲೆ ಆಗಿರುತ್ತದೆ. ಸದರಿ ರಸ್ತಯ ಮೇಲೆ ಸದರಿ ಸಮಯದಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುತ್ತದೆ ಎಂದರೆ ಸರಿ. ಎರಡನೇ ಎದುರುದಾರರ ವಾಹನದ ಚಾಲಕನು ಟೋಲ್ ಶುಲ್ಕವನ್ನು

ತಪ್ಪಿಸಲು ಹೋಗಿ ದ್ವಿಚಕ್ರ ವಾಹನಕ್ಕೆ ನಿಗಧಿಪಡಿಸಿದ ರಸ್ತೆಯಲ್ಲಿ ಎದುರುನಿಂದ ಬಂದು ಡಿಕ್ಕಿಪಡಿಸಿರುತ್ತಾನೆ. ನಾನು ಅತೀ ವೇಗ ಮತ್ತು ಅಜಾಗರೂಕತೆಯಿಂದ ದ್ವಿಚಕ್ರ ವಾಹನವನ್ನು ಚಲಾಯಿಸಿ ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ಆಸ್ಪತ್ರೆಗೆ ನನ್ನನ್ನು ಸಾರ್ವಜನಿಕರು ವಿ ಪಿ ಮಾಗ್ನನೀಸ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ದೂರನ್ನು ನನ್ನ ಪತ್ನಿ ಮರು ದಿನ ನೀಡಿರುತ್ತಾರೆ. ದೂರನ್ನು ಅಪಘಾತವಾದ 2 ದಿನಗಳ ನಂತರ ತಡವಾಗಿ ನೀಡಿರುತ್ತೇವೆ ಎಂದರೆ ಪೊಲೀಸರು ಅಪಘಾತದ ದಿನವೇ ದೂರನ್ನು ಸ್ವೀಕರಿಸಿರುವುದಿಲ್ಲ. ನನ್ನ ದ್ವಿಚಕ್ರ ವಾಹನದ ಮುಂಭಾಗ ಜಖಂಗೊಂಡಿರುತ್ತದೆ. ಎರಡನೇ ಎದುರುದಾರರ ವಾಹನದ ಐ ಎಂ ವಿ ವರದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರೊಂದಿಗೆ ಶಾಮೀಲಾಗಿ ಎರಡನೇ ಎದುರುದಾರರ ವಾಹನದ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ಅಪಘಾತದಿಂದ ನನಗೆ ಸೊಂಟ ಮತ್ತು ಎಡಗಾಲಿಗೆ ಗಾಯವಾಗಿರುತ್ತದೆ, ಶಸ್ತ್ರಚಿಕಿತ್ಸೆ ಆಗಿಲ್ಲ ಎಂದರೆ ಸರಿ. ನಿಪಿ.10 ಮತ್ತು 11 ರ ದಾಖಲೆಗಳು ಈ ಅಪಘಾತದಿಂದಾದ ಗಾಯಗಳಿಗೆ ಸಂಬಂಧಿದ್ದಲ್ಲ ಎಂದರೆ ಸರಿಯಲ್ಲ. ನಾನು ಒಳರೋಗಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳು ಸೃಷ್ಟಿತ ಬಿಲ್ಲುಗಳು ಎಂದರೆ ಸರಿಯಲ್ಲ. ಈಗ ನಾನು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ದಿನನಿತ್ಯದ ಕೆಲಸಗಳನ್ನು ಕಷ್ಟದಿಂದ ಮಾಡಬಹುದು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 4ನೇ ಖಂಡಿಕೆಯಲ್ಲಿ ನಮೂದು ಮಾಡಿರುವಂತೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 5 ಮತ್ತು 6ನೇ ಖಂಡಿಕೆಯಲ್ಲಿ ನಮೂದು ಮಾಡಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿಂದ ಉಂಟಾಗಿದ್ದರೂ ಸಹ ಮತ್ತು ಈಗಲೂ ನಾನು ಆರೋಗ್ಯವಾಗಿದ್ದರೂ ಸಹ ಪರಿಹಾರ

ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**